# ಸಮುದಾಯಗಳ ಸಹಬಾಳ್ವೆ

◆ ಓದುಗ: ಇಸ್ಲಾಂ ಧರ್ಮದ ಪ್ರವೇಶದಿಂದ ಭಾರತಕ್ಕೆ ಘಾಸಿಯಾಯಿತೆ?

ಸಂಪಾದಕ: ಭಿನ್ನ ಧರ್ಮಗಳಿಗೆ ಸೇರಿದ ಜನರು ಭಾರತದಲ್ಲಿ ಜೀವಿಸುತ್ತಾರೆ ಎನ್ನುವ ಏಕೈಕ ಕಾರಣಕ್ಕೆ, ಭಾರತವು ರಾಷ್ಟ್ರವಾಗದೆ ಇರಲು ಸಾಧ್ಯವಿಲ್ಲ. ಪರಕೀಯರು ಭಾರತವನ್ನು ಪ್ರವೇಶಿಸಿದ ನಂತರ ಅವರು ಇಲ್ಲಿರುವ ಎಲ್ಲರಲ್ಲಿ ಒಂದಾಗುತ್ತಾರೆ. ಇಂತಹ ಸನ್ನಿವೇಶಗಳು ಸೃಷ್ಟಿಯಾದ ನಂತರವೇ ದೇಶವು ರಾಷ್ಟ್ರವಾಗಿ ರೂಪುಗೊಳ್ಳಲು ಸಾಧ್ಯವಾಗುವುದು. ಯಾವುದೇ ದೇಶಕ್ಕೆ ಹೊಸದನ್ನು ಒಳಗೊಳ್ಳುವ ಅವಕಾಶವಿರಬೇಕು. ಹಾಗೆ ನೋಡಿದರೆ, ವ್ಯಕ್ತಿಗಳು ಎಷ್ಟು ಸಂಖ್ಯೆಯಲ್ಲಿದ್ದಾರೋ ಅಷ್ಟೇ ಸಂಖ್ಯೆಯ ಧರ್ಮಗಳಿವೆ. ಯಾರಿಗೆ ರಾಷ್ಟ್ರದ ಪರಿಕಲ್ಪನೆ ಸ್ಪಷ್ಟವಾಗಿರುತ್ತದೋ ಅವರು ಇನ್ನೊಬ್ಬರ ಧರ್ಮದ ವಿಚಾರದಲ್ಲಿ ಮೂಗು ತೂರಿಸದೆ ಇರುವಂಥವರಾಗಿರುತ್ತಾರೆ.

ಹಿಂದೂಗಳು ಮಾತ್ರ ಭಾರತದಲ್ಲಿ ಜೀವಿಸಬೇಕೆಂದು ಹಿಂದೂಗಳು ಭಾವಿಸಿದ್ದಲ್ಲಿ, ಅವರು ಮೂರ್ಖರ ಪ್ರಪಂಚದಲ್ಲಿ ಇದ್ದಾರೆಂದು ತಿಳಿಯಬೇಕು. ಹಿಂದೂಗಳು, ಮುಸ್ಲಿಮರು, ಪಾರಸಿಗಳು ಮತ್ತು ಕ್ರಿಶ್ಚಿಯನ್ನರು ಎಲ್ಲರೂ ಸೇರಿ ಭಾರತವನ್ನು ನಿರ್ಮಿಸಿದ್ದಾರೆ. ಇವರೆಲ್ಲರೂ ಭಾರತದ ನಿವಾಸಿಗಳು. ಇವರು ತಮ್ಮ ಒಳಿತಿಗಾಗಿಯೇ ಐಕ್ಯತೆಯಿಂದ ಜೀವಿಸಬೇಕಾಗುತ್ತದೆ. ವಿಶ್ವದ ಯಾವುದೇ ಮೂಲೆಯಲ್ಲೂ ಸಹ ರಾಷ್ಟ್ರ ಮತ್ತು ಧರ್ಮ ಸಮಾನಾರ್ಥಕ ಪರಿಕಲ್ಪನೆಗಳೆಂದು ಪರಿಗಣಿತವಾಗಿಲ್ಲ. ಹಾಗೆಯೇ ಭಾರತದಲ್ಲಿಯೂ ಸಹ ಇಂತಹ ಪರಿಸ್ಥಿತಿ ಎಂದಿಗೂ ಇರಲಿಲ್ಲ.

◆ ಓದುಗ: ಹಾಗಿದ್ದರೆ, ಹಿಂದೂಗಳು ಹಾಗೂ ಮುಸ್ಲಿಮರ ನಡುವಿನ ಜನ್ಮಜಾತ ವೈರತ್ವದ ಕುರಿತು ಏನು ಹೇಳುತ್ತೀರಿ?

ಸಂಪಾದಕ: ಅದು ವೈರಿಗಳು ಸೃಷ್ಟಿಸಿರುವ ಕತೆ. ಹಿಂದೂಗಳು ಮತ್ತು ಮುಸಲ್ಮಾನರು ಪರಸ್ಪರ ಹೊಡೆದಾಡುವುದನ್ನು ನಿಲ್ಲಿಸಿ ಬಹಳ ಕಾಲವಾಯ್ತು. ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಂಡ ನಂತರವಷ್ಟೇ ಅವರು ಹೊಡೆದಾಡುವುದನ್ನು ನಿಲ್ಲಿಸಲಿಲ್ಲ. ನೀವು ಇದನ್ನು ಸರಿಯಾಗಿ ಗಮನಿಸಬೇಕು. ಮುಸ್ಲಿಮರ ಆಳ್ವಿಕೆಯಲ್ಲಿ ಹಿಂದೂಗಳು ಪ್ರವರ್ಧಮಾನಕ್ಕೆ, ಹಿಂದೂಗಳ ಆಳ್ವಿಕೆಯಲ್ಲಿ ಮುಸ್ಲಿಮರು ಪ್ರವರ್ಧಮಾನಕ್ಕೆ ಬಂದರು ಎನ್ನುವುದನ್ನೂ ಸಹ ಇಲ್ಲಿ ಗುರುತಿಸಬೇಕು. ಪರಸ್ಪರ ಹೊಡೆದಾಡುವುದು ಆತ್ಮಹತ್ಯಾಕಾರಿ ಎನ್ನುವುದು ಎರಡೂ ಕಡೆಯವರಿಗೂ ಅರ್ಥವಾಗಿದೆ.

ಆದರೆ ಬ್ರಿಟಿಷರ ಆಗಮನದಿಂದ ಈ ಇಬ್ಬರ ನಡುವಿನ ಜಗಳಗಳಿಗೆ ಹೊಸದಾಗಿ ಕುಮ್ಮಕ್ಕು ದೊರಕಿದೆ. ನೀವು ಹೇಳಿದ ಗಾದೆ ಸ್ವರೂಪದ ಮಾತುಗಳು ಈ ಈರ್ವರೂ ಹೊಡೆದಾಡುತ್ತಿದ್ದಾಗ ಸೃಷ್ಟಿಯಾದ ಮಾತುಗಳು. ಅವನ್ನು ಈಗ ಬಳಕೆ ಮಾಡುವುದು ಅಪಾಯಕಾರಿ. ಅನೇಕ ಹಿಂದೂಗಳು ಮತ್ತು ಮುಸ್ಲಿಮರು ಸಮಾನ ಪೂರ್ವಜರನ್ನು ಹೊಂದಿದ್ದು, ಒಂದೇ ರಕ್ತವನ್ನು ಹಂಚಿಕೊಂಡವರು ಎನ್ನುವುದನ್ನು ನಾವು ಮರೆಯಬಾರದು ಅಲ್ಲವೆ? ಕೇವಲ ಧರ್ಮವನ್ನು ಬದಲಾಯಿಸಿದ ಏಕೈಕ